ಬಾಗಲಕೋಟೆ ಪಟ್ಟಣಕ್ಕೆ ಸಂಬಂಧಿಸಿದಂತೆ, ನಗರಾಭಿವೃದ್ಧಿ ಇಲಾಖೆಯಿಂದ ಹೊರಡಿಸಿದ ಆಜ್ಞೆಯನ್ನು ಹಿಂತೆಗೆದುಕೊಳ್ಳುವುದು.

97 (1158) ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಪಟ್ಟಣಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯಿಂದ ಹೊರಡಿಸಲಾಗಿರುವ 1984ರ ಸರ್ಕಾರಿ ಆಜ್ಞೆಯನ್ನು (ನಗರದಲ್ಲಿ ಹೊಸ ಕಟ್ಟಡ ಕಟ್ಟಲು ಅನುಮತಿ ನೀಡಬಾರದಾಗಿ) ರದ್ದುಪಡಿಸುವ ಅಥವಾ ಹಿಂತೆಗೆದುಕೊಳ್ಳುವ ವಿಚಾರವನ್ನು ಸರ್ಕಾರ ಮಾಡಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಸರ್ಕಾರದ ಅಧಸೂಚನೆ ಸಂಖ್ಯೆ : ಹೆಚ್ ಯುಡಿ:68:ಎಂಎಂಎಂ:83 ದಿನಾಂಕ 16-03-84ರಲ್ಲಿ ಬಾಗಲಕೋಟೆ ನಗರಸಭೆಯ ವ್ಯಾಪ್ತಿಯಲ್ಲಿ ಸರ್ಕಾರದ ಪರವಾನಗಿ ಇಲ್ಲದೆ ಯಾವುದೇ ಕಟ್ಟಡ ಪರವಾನಗಿ ನೀಡುವುದನ್ನು ನಿರ್ಬಂಧಿಸಿದ್ದು ಇರುತ್ತದೆ. ಅದರ ತದನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ : ಹೆಚ್ ಯುಡಿ:49:ಟಿಎಂಡಿ 87 ದಿನಾಂಕ 03-08-1988ರಲ್ಲಿ ಭಾಗಶಃ ಮೇಲ್ಕಂಡ ಆದೇಶವನ್ನು ಮಾರ್ಪಡಿಸಿ ಬಾಗಲಕೋಟೆ ನಗರಸಭೆ ವ್ಯಾಪ್ತಿಯಲ್ಲಿ ಆಲಮಟ್ಟಿ ಅಣೆಕಟ್ಟು ನಿರ್ಮಾಣದಿಂದ ಮುಳುಗಡೆಯಾಗದೇ ಇರುವ ಪ್ರದೇಶದಲ್ಲಿ ಮಾತ್ರ ಕಟ್ಟಡ ನಿರ್ಮಾಣ ಮಾಡಲು ಪರವಾನಗಿ ನೀಡಬೇಕೆಂದು ತಿದ್ದುಂಡಿ ಆದೇಶ ಹೊರಡಿಸಿದ್ದು ಇದೆ. ಅಲ್ಲದೆ ನಿಶ್ಚಿತವಾಗಿ ಮುಳುಗಡೆಯಾಗುವ ಹಾಗೂ ಮುಳುಗಡೆಯಾಗದೇ ಇರುವ ಪ್ರದೇಶದ ಬಗ್ಗೆ ಸಂಬಂಧಪಟ್ಟವರನ್ನು ಸಂಪರ್ಕಿಸಿ ಮತ್ತು ಖಾತ್ರಿಪಡಿಸಿಕೊಂಡು ನಂತರದಲ್ಲಿ ಮುಳುಗಡೆಯಾಗದೇ ಇರುವ ಪ್ರದೇಶಕ್ಕೆ ಕಟ್ಟಡ ಪರವಾನಗಿ ನೀಡಬೇಕೆಂದು ಮರು ಆದೇಶಿಸಿದ್ದು ಇದೆ.

ಈ ಮೇಲ್ಕಂಡ ಆದೇಶದನ್ವಯ ಇಂದಿನವರೆಗೆ ಈ ಕಟ್ಟಡ ಪರವಾನಗಿ ನೀಡುವ ವಿಷಯದಲ್ಲಿ ನೇರವಾಗಿ ಸಕ್ಷಮ ಅಧಿಕಾರ ಹೊಂದಿದ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಇವರಿಂದ ಉದ್ದೇಶಿತ ಕಟ್ಟಡ ನಿರ್ಮಾಣಗೊಳ್ಳಲಿರುವ ಪ್ರದೇಶವು ಮುಳುಗಡೆಲ್ಲಿ ಬರುವುದಿಲ್ಲವೆಂದು ಅಭಿಪ್ರಾಯ ಪತ್ರವನ್ನು ಪಡೆದುಕೊಂಡು ನಂತರವೇ ನಗರಸಭೆಯಿಂದ ಕಟ್ಟಡ ಪರವಾನಗಿಯನ್ನು ನೀಡಲಾಗುತ್ತಿದೆ.

ಆ) ಸರ್ಕಾರದ ಅಧಿಸೂಚನೆ ಸಂಖ್ಯೆ : ಹೆಚ್ ಯುಡಿ 68 ಎಂಎಂಎಂ 83 ದಿನಾಂಕ 16-03-84ರಲ್ಲಿ ಬಾಗಲಕೋಟೆ ನಗರಸಭೆಯ ವ್ಯಾಪ್ತಿಯಲ್ಲಿ ಕಟ್ಟಡ ಪರವಾನಗಿಯನ್ನು ಸರ್ಕಾರದ ಪೂರ್ವಾನುಮತಿ ಇಲ್ಲದೇ ನೀಡಬಾರದೆಂದು ಹೊರಡಿಸಿದ ಆದೇಶವು 49 ಟಿಎಂಡಿ 87 ದಿನಾಂಕ 02-08-1988ರಲ್ಲಿ ಮುಳುಗಡೆಯಾಗದೇ ಇರುವ ಪ್ರದೇಶದ ವ್ಯಾಪ್ತಿಯಲ್ಲಿ ಕಟ್ಟಡ ಪರವಾನಗಿ ನೀಡಬೇಕೆಂದು ಭಾಗಶಃ ಮಾರ್ಪಾಡು ಮಾಡಿ ಆದೇಶ ಹೊರಡಿಸಿದ್ದು ಇರುತ್ತದೆ.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರಗಳನ್ನು ಒದರಿಸಿದ್ದಾರೆ. ನಾನು ಬಾಗಲಕೋಟೆ ಕ್ಷೇತ್ರದ ಶಾಸಕ. ನಮ್ಮ ಬಾಗಲಕೋಟೆ ನಗರವು ರಾಷ್ಟ್ರದಲ್ಲಿಯೇ ಬೃಹತ್ ಯೋಜನೆಯಿಂದಾಗಿ ಮುಳುಗಡೆಯಾಗತಕ್ಕಂಥ ನಗರ ಎಂಬುದು ತಮಗೆಲ್ಲರಿಗೂ ಗೊತ್ತು. ಈ ಹಿನ್ನಲೆಯಲ್ಲಿ 1964ರಲ್ಲಿ ಅಲಮಟ್ಟಿ ಜಲಾಶಯಕ್ಕೆ ಹಿಂದಿನ ಪ್ರಧಾನಿಗಳಾಗಿದ್ದಂಥ ಶ್ರೀಮಾನ್ ಲಾಲ್‌ಬಹದ್ದೂರ್ ಶಾಸ್ತ್ರಿಗಳನವರು ಅಡಿಗಲ್ಲನ್ನು ಹಾಗಿದ್ದರು. ಸರಿಯಾಗಿ 20 ವರ್ಷಗಳ ನಂತರ ಬಾಗಲಕೋಟೆ ನಗರವನ್ನು ಸ್ಥಳಾಂತರ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಬಿಟಿಡಿಯನ್ನು ಸ್ಥಾಪನೆ ಮಾಡಿದರು. ಅದೇ ಸಂದರ್ಭದಲ್ಲಿ ಬಾಗಲಕೋಟೆಯ ಜನತೆಗೆ ಸರಕಾರದವರು ಒಂದು ಭರವಸೆ ಕೊಟ್ಟಿದ್ದರು. ನವನಗರವನ್ನು ನಿರ್ಮಾಣ ಮಾಡುತ್ತೇವೆಂಬ ಭರವಸೆಯಾಗಿತ್ತು. ಆದರ ಹಿನ್ನಲೆಯಲ್ಲಿ ಹೊಸ ಹೊಸ ಕಟ್ಟಡಗಳು ಆಗಬಾರದು, ಮುಂದೆ ಅಂಥ ಕಟ್ಟಕಗಳಿಗೆ ಪರಿಹಾರಧನವನ್ನು ಕೊಡುವ ಸಂದರ್ಭ ಬರಬಾರದು ಎಂಬ ಉದ್ದೇಶದಿಂದ ನಗರಾಭಿವೃದ್ಧಿ ಇಲಾಖೆಯವರು ಒಂದು ಸುತ್ತೋಲೆಯನ್ನು ಹೊರಡಿಸಿದ್ದರು. ಆದರಲ್ಲಿ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಪರ್ಮಿಶನ್ ಕೊಡಬಾರದು ಎಂದಿತ್ತು. ಆದಾಗಿ ಇವೊತ್ತು 16ನೇ ವರ್ಷದಲ್ಲಿ ನಾವಿದ್ದೇವೆ. ಈಗ ಮಾನ್ಯ ಸಚಿವರ ಉತ್ತರದಿಂದ ನಮಗೆ ತುಂಬಾ ಅಸಮಾಧನ ಉಂಟಾಗಿದೆ. ಮಾನ್ಯ ನಗರಾಭಿವೃದ್ಧಿ ಸಚಿವರಾದ ಶ್ರೀ ಚಿಮ್ಮನಕಟ್ಟಿಯವರು ಕೂಡ ಇಲ್ಲಿ ಉಪಸ್ಥಿತರಿದ್ದಾರೆ. ಅವರು ನಮ್ಮ ಭಾಗದಲ್ಲಿ ಪ್ರವಾಸ ಮಾಡಿದಾಗ ಮತ್ತು ಯಾವ ಸಚಿವರು ಅಲ್ಲಿ ಪ್ರವಾಸ ಮಾಡಿದಾಗ ಅಲ್ಲಿಯ ಜನತೆಯು ಒಂದು ಬೇಡಿಕೆಯನ್ನು ಮುಂದಿಟ್ಟು 1984ರ ಸುತ್ತೋಲೆ ಏನಿದೆ, ಅದನ್ನು ವಾಪಸ್ಸು ಪಡೆಯ ಬೇಕು, ಮುಳುಗಡೆ ಪ್ರದೇಶದಲ್ಲಿ ಆ ನಂತರ ಕಟ್ಟಿರುವ ಆಸ್ತಿಗಳಿಗೆ ಭೂಸ್ವಾಧೀನ ಕಾನೂನಿನನ್ವಯ ಪರಿಹಾರಧನವನ್ನು ಕೊಡಬೇಕು- ಎಲ್ಲರಿಗೂ ಕಾನೂನಿನ ಪ್ರಕಾರ ಪರಿಹಾರಧನವು ಸಿಗುವಂತಾಗಬೇಕೆಂದು ಕೇಳಿಕೊಂಡು ಬಂದಿದ್ದಾರೆ. ಅಂಥ ಸಂದರ್ಭದಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರು ಕೂಡ ಬೇಡಿಕೆಯು ವಾಸ್ತವಿಕವಾಗಿದೆ ಎಂಬ ಭರವಸೆಯನ್ನು ಕೊಟ್ಟಿದ್ದಾರೆ. ಅನೇಕ ಸಾರಿ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ಭರವಸೆಯನ್ನು ಕೊಡಬೇಕು. ಅಲ್ಲಿಯವರೆಗೆ ನಾನು ಧರಣಿ ಕುಳಿತುಕೊಳ್ಳುತ್ತೇನೆ ಎಂಬ ಮಾತನ್ನು ತಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ.

11.40 ಪಿ.ಎಂ

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಅಧ್ಯಕ್ಷರೆ, 1984ರ ಆದೇಶದ ಪ್ರಕಾರ ಬಾಗಲಕೋಟೆಯಲ್ಲಿ ಯಾವುದೇ ತರಹದ ಬಿಲ್ಡಿಂಗ್ ಕಟ್ಟುವಂತಿಲ್ಲ. ಪುನಃ 199ರಲ್ಲಿ ರೀಸೆಟ್ಸ್ ಮಾಡಿ ನೀರಾವರಿ ಮತ್ತು ರೆವಿನ್ಯೂ ಇಲಾಖೆಗಳಿಂದ ಅನುಮತಿ ಪಡೆದು ಕಟ್ಟಲು ಆದೇಶ ನೀಡಲಾಗಿದೆ. ಆದೇ ಆದೇಶ ಇಲ್ಲಿಯವರೆಗೂ ಇದೆ. ಮಾನ್ಯ ಪೂಜಾರ್‌ರವರು ಆ ಆದೇಶವನ್ನು ವಾಪಸ್ ಪಡೆಯಬೇಕೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಚಿಮ್ಮನಕಟ್ಟಿಯವರು ಜೊತೆ ಚರ್ಚೆ ಮಾಡಿ ಅನುಕೂಲವಿದ್ದರೆ ಅವರ ಮನವಿ ಪ್ರಕಾರ ಮಾಡಲು ಪ್ರಯತ್ನಿಸುತ್ತೇನೆ. ಅವರು ಸಹಕಾರ ಕೊಡಲಿ.

ಶ್ರೀ ಪಿ.ಹೆಚ್. ಪೂಜಾರ್‌ರವರು ಉತ್ತರದಿಂದ ಅಸಮಾಧಾನರಾಗಿ ಧರಣಿ ಮಾಡುವರು)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) : ಸಮಾಧಾನವಾಗದೇ ಇದ್ದರೆ ಬೇರೆ ದಾರಿಗಳಿವೆ. ಸಮಾಧಾನವಾಗಲಿಲ್ಲವೆಂದು ನೇರವಾಗಿ ಬಾವಿಗೆ ಬರುವುದು ಹವ್ಯಾಸವಾಗಿಬಿಟ್ಟಿದೆ. ಇದನ್ನು ನಿಯಂತ್ರಣ ಮಾಡದಿದ್ದರೆ ಸಭೆ ನಡೆಸುವುದು ಕಷ್ಟವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಕಾನೂನು ಸಚಿವರು ಅಭಿಪ್ರಾಯವನ್ನು ನಾವೆಲ್ಲರೂ ಒಪ್ಪುತ್ತೇವೆ. ಸ್ಪೀಕರ್ ಹತ್ತಿರ ಹೋಗಿ ಮೈಕ್ ಕೀಳುವುದನ್ನು ನಾವು ಮಾಡುವುದಿಲ್ಲ. ಬಹಳ ಸೂಕ್ಷ್ಮವಾಗಿರುತ್ತೇವೆ ನಾವು.

ಅಧ್ಯಕ್ಷರು : ಪೂಜಾರ್‌ರವರೇ ದಯವಿಟ್ಟು ಸೀಟಿಗೆ ಹೋಗಿ. ಸಚಿವರು ಭರವಸೆ ನೀಡಿದ್ದಾರೆ. ಇಂತಹ ಬೆದರಿಕೆಗಳನ್ನು ನಾನು ಮೆಚ್ಚುವುದಿಲ್ಲ. ಅವರ ಈ ಕೊನೆ ಭರವಸೆಯನ್ನು ನೋಡಿ.

-ಅಸ್ಪಷ್ಟತೆ ಗದ್ದಲ-

MR. SPEAKER : When the Minister has promised that he is going to solve the problem as early as possibl, you cannot do like this. ನೋಡ್ರಿ ನೀವು ಆದಷ್ಟು ಬೇಗನೆ ಪರಿಹರಿಸಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಅಧ್ಯಕ್ಷರೆ, 1984ರಿಂದಲೂ ಇದು....

-ಅಸ್ಪಷ್ಟತೆ-

ಅಧ್ಯಕ್ಷರು : ಹೇಳಿದ್ದಾರಲ್ಲ, ಕೊನೇ ಚಾನ್ಸ್ ಕೊಡಿ. ಈಗ ಮುಂದಿನ ಪ್ರಶ್ನೆ

-ಗದ್ದಲ-

ಅಧ್ಯಕ್ಷರು : ನೀವೆಲ್ಲ ಕುಳಿತುಕೊಳ್ಳಿ, ಮುಂದಿನ ಪ್ರಶ್ನೆ ಜೆಡಿ ನಾಯಕರದು. ಬೇಕಾದರೆ ಶೂನ್ಯ ವೇಳೆಯಲ್ಲಿ ಎತ್ತಿ, ಪ್ರಶ್ನೋತ್ತರ ವೇಳೆಯಲ್ಲಿ ಬೇಡ; We are unnecessary wasting our time of the question hour. ಬೇರೆಯವರದೆಲ್ಲ, ನಿಮ್ಮ ಸದಸ್ಯರ ಪ್ರಶ್ನೆಗಳೇ ಲ್ಯಾಪ್ಸಾಗುವುವು.

-ಗದ್ದಲ-

ಈಗಲೇ ಹೇಳಿಬಿಟ್ಟಿದ್ದೇನೆ, 12-15ಕ್ಕೆ ಮುಕ್ತಾಯ ಮಾಡುತ್ತೇನೆ.

(ಸದನದ ಎರಡೂ ಕಡೆಯ ಸದಸ್ಯರು ಮಾತನಾಡುತ್ತಿರುವರು)

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೆ, ಇದು 1984ರಿಂದ ಇದೆ, ವಾರದಲ್ಲಿ, 15 ದಿವನದಲ್ಲಿ ಮಾಡುತ್ತೇವೆಂದು ಹೇಳಬಹುದಾಗಿತ್ತಲ್ಲ.

-ಗದ್ದಲ-

MR. SPEAKER : I am closing the question hour exactly at 12.15PM. If you want to discuss it, send it in another form.

(Interruptions)

MR. SPEAKER : We have commenced the question hour at 11.15PM and I an closing the question hour at 12.15 pm. you can send another question.

(Interruptions)

SRI D.B. CHANDREGOWDA: If the Member does not behave, you have to name him.

(Interruptions)

ರಾಜ್ಯದ ಕರಾವಳಿ ಪ್ರದೇಶದಲ್ಲಿ ಅಕ್ರಮ ಮರಳು ಸಾಗಾಣಿಕೆ

98 (1045) ಶ್ರೀ ಜೆ. ಡಿ. ನಾಯಕ್ (ಭಟ್ಕಳ) : ಮಾನ್ಯ ಗಣಿ ಮತ್ತು ಭೂ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಖನಿಜ ನೀತಿ 2000ರಂತೆ ಮರಳು (Sand) ತೆಗೆಯುವ ಹಾಗೂ ಸಾಗಾಣಿಕೆ ಮಾಡಲು ಪಾಲಿಸಬೇಕಾದ ಕಾನೂನು ಕ್ರಮಗಳು ಏನು?

ಆ) ರಾಜ್ಯದ ಕರಾವಳಿ ಪ್ರದೇಶದಲ್ಲಿ ಅಕ್ರಮ ಮರಳು ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? ವಿವರ ನೀಡುವುದು.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ) ಕರ್ನಾಟಕ ಖನಿಜ ನೀತಿ 2000ರ ಅನ್ವಯದಲ್ಲಿ ಮರಳು ತೆಗೆಯುವ ಹಾಗೂ ಸಾಗಾಣಿಕೆ ಮಾಡಲು ಯಾವುದೇ ಕಾನೂನು ಕ್ರಮಗಳು ಇರುವುದಿಲ್ಲ. ಆದರೆ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಿಎ 2 ಎಂಎಂಎನ್ 98(2) ದಿನಾಂಕ 16- 10- 2000 ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ ನಿಯಮ 21(1) ಮತ್ತು 21(2) ನಿಯಮಕ್ಕೆ ತಿದ್ದುಪಡಿ ಮಾಡಲಾಗಿದೆ ಇದು ಸಾಧಾ ಮರಳಿಗಾಗಿ ದಿನಾಂಕ 16- 10- 2000ರಂದು ಜಾರಿಗೆ ಬರುವಂತೆ ರಾಜ್ಯದ ಎಲ್ಲಾ ಕಡೆ ಹರಾಜಿನ ಮೂಲಕ ಕಲ್ಲು ಗಣಿ ಗುತ್ತಿಗೆಯನ್ನು ಮಂಜೂರು ಮಾಡುವ ನಿಯಮವನ್ನು ತರಲಾಗಿದೆ. ಅದರಂತೆ ರಾಜ್ಯಪತ್ರದಲ್ಲಿ ಹರಾಜು ಮಾಡುವ ಪ್ರದೇಶವನ್ನು ಪ್ರಕಟಿಸಿ ಹರಾಜು ಮೂಲಕ ಒಂದು ವರ್ಷದವರೆಗೆ ಮಂಜೂರು ಮಾಡಬಹುದು ಮತ್ತು ಅಮಲ್ಜಾರಿ ಮಾಡಿದ ನಂತಹ ಸಾಗಾಣಿಕೆ ಮಾಡಬಹುದು. ಸಿಲಿಕಾ ಮರಳನ್ನು ಮುಖ್ಯ ಖನಿಜವೆಂದು ವರ್ಗೀಕರಿಸಿರುತ್ತಾರೆ. ಸದರಿ ಖನಿಜಕ್ಕೆ ಗಣಿ ಗುತ್ತಿಗೆಯನ್ನು ಎಂ.ಎಂ.(ಡಿ.ಆರ್) ಆಕ್ಟ್ 1957 ಮತ್ತು ಖನಿಜ ರಿಯಾಯಿತಿ ನಿಯಮ 1960 ಸಂಬಂಧಿಸಿದ ಇಲಾಖೆಯಿಂದ ಅನುಮತಿ ಪಡೆದು ಮಂಜೂರಾಗುತ್ತದೆ. ಗಣಿ ಗುತ್ತಿಗೆದಾರರು ಮುಂಗಡ ರಾಜಧನ ಪಾವತಿಸಿ ಖನಿಜ ಸಾಗಾಣಿಕೆ ಪರವಾನಿಗೆಗಳನ್ನು ಖನಿಜ ರಿಯಾಯಿತಿ ನಿಯಮ 1960ರಂತೆ ಪಡೆಯುತ್ತಾರೆ.